ESTD: 1919 ಸ್ಥಾಪನೆ

Registered No. M. 4468

ಚಂದಾ ದರ
ಸ್ಥಳೀಯರಿಗೆ
4—8—0
ಪರಸ್ಥಳೀಯರಿಗೆ
6—2—0
ಬಿಡಿ ಸಂಚಿಕೆ:
ಮಂಗಳವಾರ 0—1—6
ಶುಕ್ರವಾರ 0—0—6
ಕಾರ್ಯಾಲಯ
ರಥಬೀದಿ, ಮಂಗಳೂರು

ಕಂಠೀರವ

KANNADA KANTEERAVA BI-WEEKLY

ಸಂಪುಟ ೨೮] ಮಂಗಳೂರು, ೧೯೪೬ನೇ ಇಸವಿ ಮೇ ತಾ. ೩ನೇ ಶುಕ್ರವಾರ [ಸಂಚಿಕೆ ೧೦
VOL·XXVIII MANGALORE, FRIDAY 3 MAY, 1946 [NO. 10

Work Executed by Skilled Artists
Oil Paintings
Commercial Drawings
Cinema Slides
Etc. Etc.
Shevgoor Fine Arts
CAR ST. MANGALORE.

— ಮದ್ರಾಸ್ ಕಾಂಗ್ರೆಸ್ ಮಂತ್ರಿಮಂಡಲ. —

ಪ್ರಧಾನರು ಶ್ರೀ. ಪ್ರಕಾಶಂ ಅವರು, ಮತ್ತೆ ೧೨ ಮಂದಿ ಮಂತ್ರಿಗಳು.

ಮದ್ರಾಸ್ ಶಾಸನ ಸಭಾ ಕಾಂಗ್ರೆಸ್ ಪಾರ್ಟಿ ನಾಯಕರಾದ ಶ್ರೀ॥ ಟಿ. ಪ್ರಕಾಶಂ ಅವರು ಕಳೆದ ತಾ. ೨೯ರಲ್ಲಿ ಮದ್ರಾಸ್ ಗವರ್ನರರಿಗೆ ತಮ್ಮ ಮಂತ್ರಿಮಂಡಲದವರ ಹೆಸರುಗಳನ್ನೊಪ್ಪಿಸಿದರು. ಆ ಮಂತ್ರಿಮಂಡಲದಲ್ಲಿ ೧೩ ಮಂದಿ ಇರುವರು. ಅಂದು ಒಪ್ಪಿಸಿದ ೧೧ ಹೆಸರುಗಳು ಈ ಕೆಳಗಿನಂತಿವೆ:—

೧ ಶ್ರೀ ಟಿ. ಪ್ರಕಾಶಂ, ಬ್ಯಾರಿಸ್ಟರ್—ಎಟ್—ಲಾ ಅವರಿಗೆ ಇಲಾಖೆ,—ಪಬ್ಲಿಕ್, ಹೋಂ (ಪೋಲೀಸ್) ಆಹಾರ, ಹಣಕಾಸು.

೨ ಶ್ರೀ. ಎ ಎ. ಗಿರಿ, ಬ್ಯಾರಿಸ್ಟರ್—ಎಟ್-ಲಾ, ಅವರಿಗೆ ಇಲಾಖೆ,—ಕೈಗಾರಿಕೆ. ಶ್ರಮಜೀವನ, ಎದ್ಯುಚ್ಛಕ್ತಿ, ಸಹಕಾರ, ಪ್ಲಾನಿಂಗ್, ಅರಣ್ಯ ಮತ್ತು ಸಿಂಕೋನಾ.

೩ ಶ್ರೀ. ಎಂ. ಭಕ್ತವತ್ಸಲಂ ಬಿ. ಏ. ಬಿ. ಎಲ್., ಅವರಿಗೆ ಇಲಾಖೆ,—ಪಿ. ಡಬ್ಲ್ಯು. ಡಿ. (ಜನರಲ್, ನೀರಾವರಿ, ರಸ್ತೆಗಳು.)

೪ ಶ್ರೀ. ಟಿ. ಎಸ್. ಅವಿನಾಶಲಿಂಗಂ ಬಿ. ಏ. ಎಂ. ಎಲ್, ಅವರಿಗೆ ಇಲಾಖೆ,—ಶಿಕ್ಷಣ.

೫ ಶ್ರೀ. ಕೆ. ಭಾಷ್ಯಂ ಬಿ. ಏ. ಬಿ. ಎಲ್, ಅವರಿಗೆ ಇಲಾಖೆ,—ಶಾಸನ, (ಕೋರ್ಟು ಮತ್ತು ಜೈಲು) ಕಾನೂನಿಗೆ ಸಂಬಂಧಿಸಿದ್ದು.

೬ ಶ್ರೀ. ಪಿ. ಎಸ್. ಕುಮಾರಸ್ವಾಮಿ ರಾಜ, ಅವರಿಗೆ ಇಲಾಖೆ,—ಡೆವಲೊಪ್‌ಮೆಂಟ್ (ಕೃಷಿ, ಜಾನುವಾರು, ಫಿಶರೀಸ್.)

೭ ಎ. ಡೇನಿಯಲ್ ತೋಮಸ್ ಬಿ. ಏ. ಬಿ. ಎಲ್ ಅವರಿಗೆ ಇಲಾಖೆ,—ಸ್ಥಳೀಯ ಆಡಳಿತ

೮ ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿ ಬಿ. ಏ, ಅವರಿಗೆ ಇಲಾಖೆ,—ಸಾರ್ವಜನಿಕ ಆರೋಗ್ಯ, ವೈದ್ಯಕೀಯ

೯ ಶ್ರೀ ಕೆ. ಆರ್. ಕಾರಂತ, ಬಿ. ಏ. ಎಲ್‌ಎಲ್.ಬಿ, ಅವರಿಗೆ ಇಲಾಖೆ,—ಭೂ ಉತ್ಪತ್ತಿ.

೧೦ ಶ್ರೀ. ಕೋಟ ರೆಡ್ಡಿ, ಬಿ ಏ. ಎಲ್. ಎಲ್. ಬಿ. ಬ್ಯಾರಿಸ್ಟರ್—ಎಟ್—ಲಾ ಅವರಿಗೆ ಇಲಾಖೆ,—ಹಿಂದೂ ರಿಲಿಜಿಯಸ್ ಎಂಡೌಮೆಂಟ್; ಭೂ ಉತ್ಪತ್ತಿ ಹೊರತು ಇತರ ರೆವೆನ್ಯೂ.

೧೧ ಶ್ರೀ. ವೇಮುಲ ಕೂರ್ಮಯ್ಯ, ಬಿ. ಏ. ಎಲ್. ಎಲ್. ಬಿ, ಅವರಿಗೆ ಇಲಾಖೆ,—ಸಾರ್ವಜನಿಕ ವಾರ್ತಾ, ಇಮಿಗ್ರೇಶನ್.

ಇನ್ನೂ ಕೆಲವು ಶಾಖೆಗಳು ಬಾಕಿ ಇವೆ. ಇನ್ನೊಬ್ಬರು ಮಂತ್ರಿಗಳ ಹೆಸರನ್ನು ಸೂಚಿಸಬೇಕಾಗಿದೆ. ಅವೆಲ್ಲ ಕಾರ್ಯಗಳೂ ಕೂಡಲೇ ಕ್ರಮಶಃ ಆಗಲಿವೆ.

ಇಂದಿನ ಎದ್ಯಮಾನಗಳ ಮೇರೆಗೆ ಮುಸ್ಲಿಂ ಮಿನಿಸ್ಟರನ್ನಾಯ್ದುಕೊಳ್ಳುವುದು ಸಾಧ್ಯವಿಲ್ಲವೆಂದು ಶ್ರೀ. ಪ್ರಕಾಶಂ ಅವರು ತಿಳಿಸಿರುವರು.

ಶ್ರೀ. ಪ್ರಕಾಶಂ ಅವರ ಸಂದೇಶ.

ಶ್ರೀ॥ ಪ್ರಕಾಶಂ ಅವರು ಈ ಅಧಿಪತ್ಯಕ್ಕೊಂದು ಸಂದೇಶವನ್ನು ಕೊಟ್ಟಿರುತ್ತಾರೆ. ಅದರಲ್ಲಿ ಅವರು ನಾಳೆ "ನಾವು ಅಧಿಕಾರವನ್ನು ನಿರ್ವಹಿಸುತ್ತೇವೆ. ಮುಖ್ಯವಾಗಿ ಆಹಾರ ಸಾಮಗ್ರಿಗಳ ವಿಚಾರದಲ್ಲಿಯೂ ಇತರ ವಿಚಾರಗಳಲ್ಲಿಯೂ ಇರುವ ಈ ಪ್ರಾಂತದ ಜನರ ಸಂಕಟಗಳನ್ನು ಕೂಡಲೇ ನೀಗಿಸುವಲ್ಲಿ ನಮ್ಮ ಕೈಲಾದ ಪ್ರಯತ್ನಗಳನ್ನು ಮಾಡಲು ಹಾರೈಸುತ್ತೇವೆ. ನಮ್ಮ ಹೊಣೆಗಾರಿಕೆ ಬಹಳ ದೊಡ್ಡದಿದೆ; ನಾವು ನಮ್ಮ ಕಾರ್ಯಕ್ರಮಗಳನ್ನೂ ಕಾರ್ಯನೀತಿಯನ್ನೂ ಬೇಗನೇ ಪ್ರಕಟಿಸುತ್ತೇವೆ."

ಮುಂದೆ ನಡೆಯುವ ಮದ್ರಾಸ್ ಶಾಸನ ಸಭಾ ಕಾಂಗ್ರೆಸ್ ಪಾರ್ಟಿ ಮೀಟಿಂಗಿನಲ್ಲಿ ಎಸೆಂಬ್ಲಿ ಸ್ಪೀಕರ್ ಮತ್ತು ಕೌನ್ಸಿಲ್ ಪ್ರೆಸಿಡೆಂಟರನ್ನು ಚುನಾವಣೆಯ ಮೂಲಕ ಆರಿಸಲಾಗುವುದೆಂದು ಶ್ರೀ. ಪ್ರಕಾಶಂ ಅವರು ತಿಳಿಸಿರುವರು ಎಸೆಂಬ್ಲಿ ಅಧಿವೇಶನವು ಇದೇ ತಿಂಗಳಲ್ಲಿ ಜರುಗಲಿದೆ.

"ಈ ಮಂತ್ರಿಗಳ ಪಟ್ಟಿಯನ್ನು ಹ್ಯಾಕಮಾಂಡಿಗೆ ಕಳುಹಿಸುವಿರಾ?" ಎಂದು ಒಬ್ಬ ಪತ್ರಿಕೋದ್ಯಮಿ ಪ್ರಶ್ನಿಸಲು "ಹ್ಯಾಕಮಾಂಡಿನ ವಿಷಯದಲ್ಲಿ ನಿಮಗೇಕೆ ಅಷ್ಟು ಪ್ರೀತಿ? ನಾವೇನು ಮಾಡುವೆವೆಂಬ ಕುರಿತು ನಿಮಗೆ ಏಕೆ ಇಷ್ಟು ಆತುರ? ನಾವು ನಮ್ಮ ನಿತ್ಯಕೃತ್ಯವನ್ನು ನೆರವೇರಿಸಬೇಕು. ಈ ಮಂತ್ರಿಗಳ ಪಟ್ಟಿ ಹ್ಯಾಕಮಾಂಡಿನವರಿಗೆ ವಾರ್ತಾ ಏಜೆನ್ಸಿಗಳ ಮೂಲಕ ತಿಳಿದು ಬರುವುದು" ಎಂದು ಶ್ರೀ. ಪ್ರಕಾಶಂ ಅವರು ತಿಳಿಸಿದರು. ಅಲ್ಲದೆ, ಸಾರ್ವಜನಿಕವಾದ ಹಲವು ಪ್ರಶ್ನೆಗಳ ಕುರಿತಾಗಿ ತಾವು ಗವರ್ನರರೊಡನೆ ಚರ್ಚಿಸಿದ್ದೇವೆಂದೂ ಅರುಹಿದರು.

ಈ ಸಂಬಂಧವಾಗಿ ಹೊರಟ ಸರಕಾರದ ಒಂದು ಪ್ರಕಟನೆಯ ಮೇರೆಗೆ—ಗವರ್ನರರು ಶ್ರೀ. ಪ್ರಕಾಶಂ ಅವರೊಪ್ಪಿಸಿದ ಮಂತ್ರಿಗಳ ಹೆಸರಿನ ಪಟ್ಟಿಯನ್ನು ಅಂಗೀಕರಿಸಿದ್ದಾರೆ.

ಸೆಕ್ಷನ್ ೯೩ರ ಅವಸಾನ

ಇದುವರೆಗೆ ಜ್ಯಾರಿಯಲ್ಲಿದ್ದ ಇಂಡಿಯಾ ಆಕ್ಟಿನ ಸೆಕ್ಷನ್ ೯೩ರ ಮೇರೆಗಿನ ಗವರ್ನರರ ಅಧಿಕಾರವು ಇದೇ ಕಳೆದ ತಾ. ೩೦ರಿಂದ ಅವಸಾನವಾಯಿತು. ಕಳೆದ ತಾ. ೩೦ರಲ್ಲಿ ಕಾಂಗ್ರೆಸ್ ಮಂತ್ರಿಮಂಡಲದ ಶಕ ಆರಂಭವಾಯಿತು.

ಗವರ್ನರರ ಎಡ್ಜ್‌ಟೆಸರುಗಳು

ಗವರ್ನರರ ಎಡ್ಜ್‌ಟೆಸರುಗಳು ಆಗಲೇ ತಮ್ಮ ಹುದ್ದೆಗಳಿಂದ ನಿವೃತ್ತರಾದರು. ಸರ್. ಸ್ಟೀತೆ ಅವರು ಉದ್ಯೋಗ ನಿವೃತ್ತಿಗೆ ಪೂರ್ವದಲ್ಲಿ ರಜೆ ಪಡೆದಿರುವರು. ಸರ್. ಎ. ರಾಮಮೂರ್ತಿ ಅವರು ಸರಕಾರದ ಚೀಫ್ ಸೆಕ್ರಟರಿಯಾಗಲಿರುವರು. ಮಿ॥ ಗಳಾದ ಇ. ಎಂ. ಗೋನ್ ಅವರೂ ಸಿ. ಎಚ್. ಮಾಸ್ಟರ್‌ಮ್ಯಾನ್ ಅವರೂ ರೆವಿನ್ಯೂ ಬೋರ್ಡಿಗೆ ಹಿಂದಿರುಗಿರುವರು. ಎ. ಜೆ. ಬಿ. ಬ್ರೌನ್ ಅವರು ಗವರ್ನರರ ಕಾರ್ಯದರ್ಶಿಗಳಾಗುವರು.

ರಾಜಪ್ರಮಾಣ

ಕಳೆದ ತಾ. ೩೦ರಲ್ಲಿ ಶ್ರೀ ಟಿ. ಪ್ರಕಾಶಂ ಅವರೂ ಇತರ ೯ ಮಂದಿ ಮಂತ್ರಿಗಳೂ ರಾಜಪ್ರಮಾಣ ವಾಕ್ಯವನ್ನು ಕೈಕೊಂಡರು. ಮದ್ರಾಸಿನಲ್ಲಿ ಇಲ್ಲದ ಕಾರಣ ಶ್ರೀ॥ ಪಿ. ಎಸ್. ಕುಮಾರಸ್ವಾಮಿ ರಾಜರು ಆ ವಾಕ್ಯವನ್ನು ಕೈಕೊಳ್ಳಲು ಆಗಲಿಲ್ಲ.

ಗವರ್ನರರ ಭಾಷಣ

ಮಂತ್ರಿಮಂಡಲದವರು ರಾಜಪ್ರಮಾಣ ವಾಕ್ಯವನ್ನು ಕೈಕೊಳ್ಳುವ ಈ ಸಂಸ್ಕಾರವು ನಡೆದ ಮೇಲೆ ಗವರ್ನರರು ತಮ್ಮ ೨೫ ವರ್ಷಗಳ ಕಾಲದ ಸೇವೆಯಲ್ಲಿ ಮದ್ರಾಸಿನಲ್ಲೊಂದು ಜನಪ್ರಿಯ ಸರಕಾರವನ್ನು ಸ್ಥಾಪಿಸುವ ಸುಯೋಗವೊದಗಿದುದಕ್ಕಾಗಿ ಸಂತೋಷಿಸಿ, ಈ ಮಂತ್ರಿಮಂಡಲದ ಕರ್ತವ್ಯವನ್ನು ನಿರೂಪಿಸಿದರು. ಈ ಅಧಿಪತ್ಯದ ಸುಮಾರು ೫೦ ಮಿಲ್ಯ ಪ್ರಜೆಗಳ ಕ್ಷೇಮಚಿಂತನೆ ಈ ಮಂತ್ರಿಮಂಡಲದ ಮೇಲಿದೆ ಎಂದೂ ಆಹಾರ ಸಮಸ್ಯೆ ಕಠಿನವಾಗಿದೆ ಎಂದೂ ತಾವು ಆ ವಿಷಯದಲ್ಲಿ ಕೈಲಾದ ಸಹಾಯ ನೀಡುವೆವೆಂದೂ ಮುಂದಿನ ಗವರ್ನರ್ ಲೆ॥ ಕ॥ ಸರ್ ಆರ್ಚಿಬಾಲ್ಡ್ ನೈ ಅವರೂ ಹಾಗೇ ಮಾಡದಿರರೆಂದೂ ಕೋರಿದರು. ಮೊದಲಿನ ಮಂತ್ರಿಮಂಡಲದ ಐತಿಹ್ಯವನ್ನು ಮರೆಯದೆ ಈ ಮಂತ್ರಿಮಂಡಲದವರೂ ಅದನ್ನೇ ಎತ್ತಿ ಹಿಡಿಯಲೆಂದರು.

ಶ್ರೀ॥ ಪ್ರಕಾಶಂ ಅವರ ಭೇಟಿ ಕಾಲದಲ್ಲಿ—

"ರಾಜಕೀಯ ಬಂದಿಗಳನ್ನು ಬಿಡುಗಡೆ ಮಾಡುವ ದಂಡ ತೆರಿಗೆಯನ್ನು ರದ್ದು ಮಾಡುವ ವಿಚಾರದಲ್ಲಿದ್ದೇನೆ. ನಮ್ಮ ಕಾರ್ಯನೀತಿಯನ್ನು ಮುಂದೆ ತಿಳಿಸುತ್ತೇವೆ. ಇಬ್ಬರು ಮಂತ್ರಿಗಳ ಹೆಸರು ಕಾಲಾನುಭಾಗದಲ್ಲಿ ಪ್ರಕಟವಾಗುತ್ತದೆ. ಪಾರ್ಲಿಮೆಂಟರಿ ಸೆಕ್ರಟರಿಗಳ ನೇಮಕದ ವಿಚಾರ ಆಲೋಚನೆಯಲ್ಲಿದೆ" ಎಂದು ಶ್ರೀ॥ ಪ್ರಕಾಶಂ ಅವರು ಒಂದು ಭೇಟಿಯ ಕಾಲದಲ್ಲಿ ತಿಳಿಸಿದರು.

ಮಂತ್ರಿಗಳ ಹೇಳಿಕೆಗಳು

ಪತ್ರಿಕೋದ್ಯಮಿಗಳು ಮಂತ್ರಿಗಳನ್ನು ಕಂಡಾಗ ಅವರು ಕೊಟ್ಟ ಹೇಳಿಕೆಗಳು:—

ಶ್ರೀಮತಿ ರುಕ್ಮಿಣೀ ಲಕ್ಷ್ಮೀಪತಿ:—

"ನನ್ನ ನೇಮಕವು ಈ ಆಧಿಪತ್ಯದ ಮಹಿಳಾ ಸಮಾಜಕ್ಕೇ ಒಂದು ಗೌರವ. ನನಗೆ ಪ್ರಾಮುಖ್ಯವಾದುದೊಂದು ಇಲಾಖೆಯೇ ದೊರಕಿದೆ. ಜನತೆ ಸಹಕರಿಸಬೇಕು. ನಾನು ಈ ಆಧಿಪತ್ಯದ ಹೆಂಗಸರ ಆರೋಗ್ಯದ ಕ್ಷೇಮಚಿಂತನೆಯನ್ನು ಸರಿಯಾಗಿ ನೋಡಿಕೊಳ್ಳುವೆನು."

ಶ್ರೀ ಭಕ್ತವತ್ಸಲಂ:—

"ನೀರಾವರಿಯ ಸಮಸ್ಯೆಗೂ ಆಹಾರ ಸಮಸ್ಯೆಗೂ ಸಮೀಪ ಸಂಬಂಧವಿದೆ. ಮಂತ್ರಿಮಂಡಲದವರು ಶಿಕ್ಷಣವನ್ನೂ ಸುಧಾರಿಸದಿರುವುದಿಲ್ಲ"

ಶ್ರೀ. ಭಾಷ್ಯಂ:—

"ಸೆರವೇಂಸತಕ್ಕ ಮೊದಲನೆ ಕರ್ತವ್ಯ ಯಾವುದೆಂದರೆ—ಯಾವತ್ತು ರಾಜಕೀಯ ಬಂದಿಗಳ ವಿಚಾರವನ್ನೂ ಎಮರ್ಶಿಸಿ ಅವರನ್ನು ಬಿಡುಗಡೆ ಮಾಡುವುದೇ. ಎಜ್ಜಿಕ್ಯೂಟಿವ್ ಮತ್ತು ಜುಡೀಶಿಯಲ್ ಇಲಾಖೆಗಳನ್ನು ಬೇರ್ಪಡಿಸುವ ವಿಚಾರವನ್ನೂ ಈ ಮಂತ್ರಿಮಂಡಲವು ಮಾಡಲಿದೆ"

ಶ್ರೀ. ಕೂರ್ಮಯ್ಯ:—

"ವಾರ್ತೆಗಳನ್ನು ಸಾಧ್ಯವಿರುವಷ್ಟು ಬೇಗನೆ ಹಂಚಲಾಗುವುದು; ಈ ಕಾರ್ಯದಲ್ಲಿ ಪತ್ರಿಕೆಗಳು ಸಹಕರಿಸಬೇಕು"

ಮಿ. ಡೇನಿಯಲ್ ತೋಮಸ್:—

"ಸ್ಥಳೀಯ ಆಡಳಿತವು ಪರಿಣಾಮಕಾರಿಯಾಗುವ ಹಾಗೆ ಗಭೀರ ಪ್ರಶ್ನೆಗಳಿಗೆ ಕೈ ಹಾಕಬೇಕಾಗಿದೆ. ಗ್ರಾಮ ಪಂಚಾಯಿತಿಗಳು ಜನಪ್ರಿಯ ಸಂಸ್ಥೆಗಳಾಗುವ ಹಾಗೆ ಪ್ರಥಮತಃ ಅದಕ್ಕೆ ಸಂಬಂಧಿಸಿದ ಕಾನೂನುಗಳ ಕುರಿತೂ ಆಲೋಚಿಸಬೇಕು"

ಸರ್. ಎಸ್. ವಿ. ರಾಮಮೂರ್ತಿಗಳಿಗೆ ರಜೆ

ಸರಕಾರದ ಚೀಫ್ ಸೆಕ್ರಟರಿಗಳಾಗಬೇಕಾಗಿದ್ದ ಮೇಲ್ಕಂಡ ಮಹನೀಯರು ಈಗ ರಜೆಯ ಮೇಲೆ ತೆರಳುವುದರಿಂದ ಅವರ ಸ್ಥಾನಕ್ಕೆ ಎಂ. ಇ. ಎಂ. ಗೋನ್ ಅವರು ನೇಮಿಸಲ್ಪಟ್ಟಿರುತ್ತಾರೆ.

೧೫೫ ಮಂದಿ ರಾಜಕೀಯ ಕೈದಿಗಳಿಗೆ ಬಿಡುಗಡೆ

೧೯೪೨ ಗಲಭೆಯಲ್ಲಿ ರಾಮ್ನಾಡ್ ಜಿಲ್ಲೆಯಿಂದ ದಂಡನೆಗೆ ಗುರಿಯಾದ ೧೫೫ ಮಂದಿಯನ್ನು ಬಿಡುಗಡೆ ಮಾಡಲಾಗಿದೆ. ೪೨ರ ಗಲಭೆಯಲ್ಲಿ ದಂಡನೆಗೆ ಗುರಿಯಾದವರ ಒಟ್ಟು ಸಂಖ್ಯೆ ೩೬೧ ಇದ್ದು ಇದುವರೆಗೆ ಅವರಲ್ಲಿ ೨೬೨ ಮಂದಿಯ ಬಿಡುಗಡೆಯಾಗಿದೆ. ಉಳಿದವರೆಲ್ಲಾ ಜೈಲಲ್ಲೇ ಇದ್ದಾರೆ.

ಮದ್ರಾಸಿನ ಹೊಸ ಮಂತ್ರಿಗಳ ಪರಿಚಯ

ಶ್ರೀ. ಪ್ರಕಾಶಂ

ಈ ಮಹನೀಯರು ಮದ್ರಾಸ್ ಕಾಂ॥ ಲೆ॥ ಪಾರ್ಟಿಯ ನಾಯಕರು; ಪ್ರಧಾನರು. ೧೯೨೧ರ ವರೆಗೆ ಇವರು ಮದ್ರಾಸಿನಲ್ಲಿ ಒಬ್ಬ ಭಾರಿ ವಕೀಲರಾಗಿದ್ದರು. ೨೧ರಲ್ಲಿ ಅವರು ವಕೀಲಿ ಬಿಟ್ಟು ಅಸಹಕಾರಕ್ಕೆ ಸೇರಿದರು. ಅವರು "ಸ್ವರಾಜ್ಯ" ಪತ್ರಿಕೆಯ ಸಂಪಾದಕರು ಪ್ರಕಾಶಕರು, ಸ್ಥಾಪಕರು ಆ ಪತ್ರಿಕೆ ಈ ಆಧಿಪತ್ಯದ ರಾಜಕೀಯ ಜನಜೀವನವನ್ನು ಹಲವಾರು ವರ್ಷಗಳ ವರೆಗೆ ಮುನ್ನಡೆಸಿತು. ಅವರು ೧೯೨೬-೩೦ರ ವರೆಗೆ ಕೇಂದ್ರ ಎಸೆಂಬ್ಲಿ ಮೆಂಬರರಾಗಿದ್ದು ಅನಂತರ ಕಾಂಗ್ರೆಸಿನ ಆದೇಶದಂತೆ ಆ ಸ್ಥಾನಕ್ಕೆ ರಾಜಿ ಕೊಟ್ಟರು. ಅವರು ೪೦ರಲ್ಲಿ ಒಮ್ಮೆ ೪೨-೪೫ರ ವರೆಗೂ ಮತ್ತೊಮ್ಮೆ ಹೀಗೆ ಎರಡು ಸಲ ನಿಬಂಧವಾಸದಲ್ಲಿದ್ದರು. ಅವರು ಕಾಲು ಶತಮಾನದಿಂದ ಅ॥ ಭಾ॥ ಕಾಂ॥ ಕಮಿಟಿಯ ಮೆಂಬರರು; ಈಗ ಆಂಧ್ರ ಪ್ರಾಂತಿಕ ಕಾಂ॥ ಕಮಿಟಿಯ ಅಧ್ಯಕ್ಷರು.

ಇವರು ಮದ್ರಾಸ್ ಎಸೆಂಬ್ಲಿಗೆ ೨೭ರಲ್ಲಿ ಚುನಾಯಿತರಾದರು; ಹಿಂದಿನ ಕಾಂಗ್ರೆಸ್ ಮಂತ್ರಿಮಂಡಲದಲ್ಲಿ ರೆವಿನ್ಯೂ ಮಂತ್ರಿಗಳೂ ಇವರೇ. ಇವರು "ಭೂಮಿ ಮತ್ತು ಆಸ್ತಿಪಾಸ್ತಿ ಕಾನೂನು ಸಮಿತಿ"ಯ ಅಧ್ಯಕ್ಷರಾಗಿದ್ದರು. ಈಚಿಗಿನ ಚುನಾವಣೆಯಲ್ಲಿ ಮದ್ರಾಸ್ ನಗರದಲ್ಲಿ ಇವರಿಗೆ ಎದುರಾಳಿಗಳು ಇರಲಿಲ್ಲ.

ಶ್ರೀ। ಗಿರಿಯವರು

ಶ್ರೀ॥ ವಿ. ವಿ. ಗಿರಿಗಳು ಹಿಂದುಸ್ಥಾನದ ಶ್ರಮಜೀವನದಲ್ಲಿ ಮುಖ್ಯ ಭಾಗವಹಿಸಿದವರು; ಹೋಂ ರೂಲ್ ಲೀಗಿನಲ್ಲಿ ಮೊದಲಿನವರು; ೨೧-೨೨ರಲ್ಲಿ ಅಸಹಕಾರ ವ್ರತವನ್ನು ಕೈಕೊಂಡರು. ಅವರು ರೈಲ್ವೆ ಟ್ರೇಡ್ ಯೂನಿಯನುಗಳನ್ನು ಸ್ವಯ ಸ್ಥೆಗೊಳಿಸಿ ೨೬ರಲ್ಲಿ ಮದ್ರಾಸಿನಲ್ಲಿ ಸಮಗ್ರ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಅಧ್ಯಕ್ಷತೆ ವಹಿಸಿದರು. ಅವರೀಗ ಸಮಗ್ರ ಭಾರತ ರೈಲ್ವೆ ಜನರ ಫೆಡರೇಶನಿನ ಅಧ್ಯಕ್ಷರು. ಅವರು ೨೭ರಲ್ಲಿ "ಜನಾಂಗ ಸಂಘ"ದ ಸಭೆಗೂ, ೧೯೩೦-೩೧ರಲ್ಲಿ ಜರುಗಿದ ರೌಂಡ್ ಟೇಬ್ಲ್ ಕಾನ್ಫರೆನ್ಸಿಗೂ ಶ್ರಮಜೀವಿಗಳ ಪ್ರತಿನಿಧಿಯಾಗಿ ಹೋಗಿದ್ದರು. ಅವರು ೩೪ರಲ್ಲಿ ಕೇಂದ್ರ ಎಸೆಂಬ್ಲಿಯ ಚುನಾಯಿತ ಸದಸ್ಯರಾದರು. ೩೭ರಲ್ಲಿ ಇವರು ಬೊಬ್ಬಿಲಿ ರಾಜರನ್ನು ಸೋಲಿಸಿ ಮದ್ರಾಸ್ ಎಸೆಂಬ್ಲಿ ಮೆಂಬರರೂ ಹಿಂದಿನ ಕಾಂಗ್ರೆಸ್ ಮಂಡಲದ ಲೇಬರ್ ಶಾಖೆಯ ಮಂತ್ರಿಗಳೂ ಆಗಿದ್ದರು. ಅವರು ಈ ಸಲದ ಚುನಾವಣೆಯಲ್ಲಿ ಎಶಾಖಪಟ್ಟಣದಿಂದ ಬಂದಿರುತ್ತಾರೆ.

ಶ್ರೀ। ಭಕ್ತವತ್ಸಲಂ

೧೯೨೩ರಲ್ಲಿ ಇವರು ಹೈ ಕೋರ್ಟ್ ವಕೀಲರು; ೨೭ರಲ್ಲಿ ವಕಾಲತು ಬಿಟ್ಟರು. ಟಿ. ಎನ್. ಸಿ ಸಿ.ಯಲ್ಲಿ ಇವರು ಮೆಂಬರರು; ಕಾರ್ಯದರ್ಶಿಗಳಾಗಿದರು ಅವರು ಹಲವು ವರುಷಗಳಿಂದ ಸಮಗ್ರ ಭಾರತ ಕಾಂಗ್ರೆಸ್ ಕಮಿಟಿಯ ಮೆಂಬರರು. ಇವರು ಸತ್ಯಾಗ್ರಹದ ಸಂದರ್ಭದಲ್ಲಿ ೩೨ರಲ್ಲಿಯೂ, ೪೦ರಲ್ಲಿಯೂ ೨ ಸಲ ಜೈಲಿಗೆ ಹೋಗಿದ್ದರು. ೪೨-೪೫ರಲ್ಲಿ ನಿರ್ಬಂಧವಾಸದಲ್ಲಿದ್ದರು. ಅವರು ಮದ್ರಾಸ್ ಕಾರ್ಪರೇಶನಿನ ಚುನಾಯಿತ ಫ್ಯೂಟ ಮೇಯರರೂ, ಹಿಂದಿನ ಕಾಂಗ್ರೆಸ್ ಮಂಡಲದ ಕಾಲದಲ್ಲಿ ಕಾಂಗ್ರೆಸ್ ಪಾರ್ಟಿ "ಎಸ್"ರೂ ಪಾರ್ಲಿಮೆಂಟ್ ಸೆಕ್ರೆಟರಿಗಳೂ ಆಗಿದ್ದರು.

ಶ್ರೀ। ಭಾಷ್ಯಂ

೧೯೦೨ರಲ್ಲಿ ಇವರು ಮದ್ರಾಸ್ ಹೈ ಕೋರ್ಟ್ ವಕೀಲರು; ೧೯೨೭ರಲ್ಲಿ ಮದ್ರಾಸಿನಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದ ಸ್ವಾಗತ ಸಮಿತಿಯ ಜನರಲ್ ಸೆಕ್ರಟರಿಗಳು. ಮದ್ರಾಸ್ ಯುನಿವರ್ಸಿಟಿಯ ಸೆನೇಟ್, ಸಿಂಡಿಕೇಟುಗಳ ಮೆಂಬರರು. ಸಿಟ್ ಕಾರ್ಪರೇಶನಿನ ಕಾಂಗ್ರೆಸ್ ಪಾರ್ಟಿ ನಾಯಕರು (೩೬ರಲ್ಲಿ). ೩೭ರಲ್ಲಿ ಇವರು ಎಸೆಂಬ್ಲಿ ಮೆಂಬರರಾದರು. ೪೬ರಲ್ಲಿ ಯುನಿವರ್ಸಿಟಿ ಕಾನ್ಸ್ಟಿಟ್ಯುಯೆನ್ಸಿಗೆ ತಿರುಗಿ ಬಂದರು. ಇವರು ಮಲಯಕ್ಕೆ ಹಿಂದೀ ಆರೋಪಿಗಳ ಪರ ವಾದಿಸಲು ಹೋಗಿ ಬಂದವರು.

ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿ

೧೯೨೬ರಲ್ಲಿ ಪ್ಯಾರಿಸಿನಲ್ಲಿ ಜರುಗಿದ ಅಂತರಜನಾಂಗ ಮಹಿಳಾ ಪರಿಷತ್ತಿಗೆ ಒಬ್ಬ ಡೆಲಿಗೇಟರರಾಗಿ ಇವರು ತೆರಳಿದವರು; ಇವರು ಭಾರತ ಸ್ತ್ರೀ ಮಹಾಮಂಡಲದ ಕಾರ್ಯದರ್ಶಿನಿ; ಚೆಂಗಲ್ಪೇಟೆ ಜಿ॥ ಬೋರ್ಡು ಮೆಂಬರ್; ಮದ್ರಾಸ್ ಸೆನೆಟಿನ ಒಬ್ಬ ಸದಸ್ಯೆ; ೩೧ರಲ್ಲಿ ಇವರು "ಉಪ್ಪಿನ ಶಾಸನ" ಮುರಿದರೆಂದು ಅವರಿಗೆ ಜೈಲು ಆಯಿತು ತಿರುಗಿ ೩೨ರಲ್ಲಿ ಸತ್ಯಾಗ್ರಹದ ಸಂಬಂಧ ಅವರಿಗೆ ದಂಡನೆ ವಿಧಿಸಲ್ಪಟ್ಟಿತು. ಇವರು ೩೫ರಲ್ಲಿ ಮದ್ರಾಸ್ ಕೌನ್ಸಿಲಿನ ೩೭ರಲ್ಲಿ ಎಸೆಂಬ್ಲಿಯ ಚುನಾಯಿತ ಪ್ರತಿನಿಧಿಗಳಾದರು. ಹಿಂದಿನ ಎಸೆಂಬ್ಲಿಯಲ್ಲಿ ಇವರು ಡೆಪ್ಯುಟಿ ಸ್ಪೀಕರರಾಗಿದ್ದರು.

ಶ್ರೀ ಅವಿನಾಶಲಿಂಗಂ

ಇವರು ಹಲವು ವರ್ಷಗಳಿಂದ ಕಾಂಗ್ರೆಸ್ ಚಟುವಟಿಕೆಗಳಲ್ಲಿ ಭಾಗ ವಹಿಸಿದ್ದರು; ಹಲವು ವರ್ಷಗಳ ವರೆಗೆ ಇವರು ಕೇಂದ್ರ ಎಸೆಂಬ್ಲಿ ಮೆಂಬರರಾಗಿದ್ದರು. ಇವರು ಕೊಯಮುತ್ತೂರಲ್ಲಿ ಶ್ರೀ ರಾಮಕೃಷ್ಣ ವಿದ್ಯಾಲಯವನ್ನು ನಡೆಸುತ್ತಿದ್ದಾರೆ.

ಶ್ರೀ. ಕುಮಾರಸ್ವಾಮಿ ರಾಜ

ಇವರು ೧೯೧೭ರಲ್ಲಿ ಸಾರ್ವಜನಿಕ ಜೀವನವನ್ನು ಪ್ರವೇಶಿಸಿ ರಾಮ್ನಾಡ್ ಜಿ॥ ಕಾಂ॥ ಸಮಿತಿ ಅಧ್ಯಕ್ಷರಾಗಿದ್ದರು. ಸಿ॥ ಭಾ॥ ಕಾಂ॥ ಕಮಿಟಿಯ ಒಬ್ಬ ಮೆಂಬರರೂ, ಟಿ. ಎನ್. ಸಿ. ಸಿ. ವರ್ಕಿಂಗ್ ಕಮಿಟಿ ಸದಸ್ಯರೂ ಆಗಿದ್ದು ಕೇಂದ್ರ ಎಸೆಂಬ್ಲಿಗೆ ಇವರು ೩೪ರಲ್ಲಿ ಸದಸ್ಯರಾಗಿ ಆರಿಸಲ್ಪಟ್ಟರು. ೩೭ರಲ್ಲಿ ಮದ್ರಾಸ್ ಎಸೆಂಬ್ಲಿ ಮೆಂಬರರಾದರು. ಇವರು ಸಹಕಾರ ಮತ್ತು ಕೆಲವು ಬೇಂಕುಗಳ ಶ್ರೇಯಸ್ಸಿಗಾಗಿ ದುಡಿದವರು.

ಶ್ರೀ. ಕಾರಂತರು

ಇವರು ೨೨ರಲ್ಲಿ ತಮ್ಮ ವಕೀಲಿ ವೃತ್ತಿಯನ್ನು ಬಿಟ್ಟು ಅಸಹಕಾರ ಪಂಥಕ್ಕೆ ಸೇರಿ ೨೬ರಲ್ಲಿ ಮದ್ರಾಸ್ ಎಸೆಂಬ್ಲಿಗೆ ಆರಿಸಲ್ಪಟ್ಟರು. ಇವರು ೩೦ರಲ್ಲಿ ಕಾಂಗ್ರೆಸಿನ ಆದೇಶಾನುಸಾರವಾಗಿ ಆ ಸ್ಥಾನಕ್ಕೆ ರಾಜಿಕೊಟ್ಟರು. ರೆವಿನ್ಯೂ ಸೆಟ್ಲ್‌ಮೆಂಟ್, ಸರ್ವೆ, ಅರಣ್ಯ ಮೊದಲಾದುವುಗಳಿಗೆ ಸಂಬಂಧಿಸಿದ ಹಲವಾರು ಸಮಸ್ಯೆಗಳ ವಿಚಾರದಲ್ಲಿ ವರದಿಗಳನ್ನೂ ಮೆಮೊರೆಂಡಾಗಳನ್ನೂ ಇವರು ಬರೆದು ಸರಕಾರದ ಮುಂದಿಟ್ಟವರು ೪೨ರಲ್ಲಿ ಇವರು ಅಂದಿನ ಅಗಲಭೆಯ ಸಂಬಂಧ, ಈಚಿಗಿನ ವರೆಗೂ ನಿರ್ಬಂಧವಾಸದಲ್ಲಿ ಇದ್ದವರು. ಹಿಂದಿನ ಕಾಂಗ್ರೆಸ್ ಮಂತ್ರಿಮಂಡಲದಲ್ಲಿ ಇವರು ಪಾರ್ಲಿಮೆಂಟರಿ ಸೆಕ್ರಟರಿಗಳಾಗಿದ್ದವರು.

ಮಿ. ಡೆನಿಯಲ್ ತೊಮಸ್

ತಿನ್ನವೆಲ್ಲಿಯ ಒಬ್ಬ ದೊಡ್ಡ ಕ್ರಿಮಿನಲ್ ವಕೀಲರಿವರು. ೩೭ರಲ್ಲಿ ಚುನಾವಣೆಯಲ್ಲಿ ಸೋತ ಬಳಿಕ, ಕೆಲವು ವರ್ಷಗಳ ಹಿಂದೆ ಕಾಂಗ್ರೆಸಿಗೆ ಸೇರಿದರು ಇವರು ೧೯೧೯ರಿಂದ ಪಾಮಕೋಟ ಮುನ್ಸಿಪಲ್ ಕೌನ್ಸಿಲಿನ ಮೆಂಬರರು; ಈಗ ಅದರ ಚೆಯರ್ಮ್ಯಾನರು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. I. A. 879/1946.
in O. S. 121/1946,

ಜೋಯಿ ಸಹಾ —ವಾದಿರು.

ಮತ್ತು

ರಾಮ ಬೆಳ್ಳಪ್ಪಾಡಿ ಸಹಾ —ಪ್ರತಿವಾದಿರು.

ನೋಟೀಸು

ವಾದೀರ ವ 1ರಿಂದ 3ನೇ ವರೇಗಿನ ಪ್ರತಿವಾದಿರ ತರವಾಡ ಹಕ್ಕಿನ ಕಾಸರಗೋಡು ಗ್ರಾಮದ ರಿಸರ್ವೆ ನಂಬ್ರ 88/10 (ಹಳೆ ಸರ್ವೆ ನಂಬ್ರ 45/2)ರ ಪೈಕಿ ಪಡು ತೆಂಕು ಭಾಗ ಸುಮಾರು 30 ಸೆಂಟ್ಸ್ ಬಾಗಾಯಿತು ಸ್ಥಳದಲ್ಲಿ ಳೂವ ವಿಧದಿಂದಲೂ ಪ್ರವೇಶಿಸದಂತೆ 5ನೇ ಪ್ರತಿವಾದಿಯನ್ನು ಪರ್ಮನೆಂಟ್ ಇಂಜಕ್ಷನ್ ಮೂಲಕ ನಿರ್ಬಂಧಿಸಬೇಕಾಗಿ ವಗ್ಗೆರೆ ನಿವೃತ್ತಿಗಳು ಕೇಳಿ ತರವಾಡಿನ ಪರವಾಗಿ ವಾದಿರು ಮಾಡಿದ ಮೇಲ್ಕಂಡ ದಾವೆಯು ತಾರೀಕು 12—6—1946ಕ್ಕೆ ಇಟ್ಟಿರುತ್ತದೆ. ಈ ವ್ಯಾಜ್ಯದಲ್ಲಿ ಕಕ್ಷಿಯಲ್ಲಿ ಸೇರುವರೆ ಮನಸ್ಸುಳ್ಳವರು ಆ ದಿವಸ ಯಾ ಅದರ ಮುಂಚಿತವಾಗಿ ಬಂದು ಆರ್ಜಿಕೊಟ್ಟು ಕಕ್ಷಿಯಲ್ಲಿ ಸೇರಬಹುದೆಂಬ ಅಂಗತಿ ಈ ಮೂಲಕ ತಿಳಿಸೋಣಾಗುತ್ತವೆ.

K. Sundar Rama Shetty
Vakil for Plaintiff.

REGISTERED
Anusuiya Hills Herb

A Sovereign remedy to relieve Asthma completely by one dose to be taken on full moon.

16—5—1946.

Mr. S. K. Dar, Sec. Judge Allahabad writes that 9 have been cured out of 10 by this herb.

APPLY TO:—
Mahatma S. K. Das,
Sree Sant Sewa Ashram,
P. O. CHITRAKOT, U. P.

PREMIER LIFE & GENERAL INSURANCE Co., LTD.
Madras.

Invites applications from capable Insurance Organisers preferably those in the line with a ready organization to take up the Chief Agency for Motor car Insurance Business on most attractive terms. Best opportunity for right type of persons in view of the Motor car Insurance against third party risk being made compulsory.

ಮಂಗಳೂರು

ಶಾಲಾ ವರ್ಧಂತಿ

ಬೋಳೂರು ರೂರಲ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಈಚಿಗೆ ಶ್ರೀ. ಯು. ಕೇಶವರಾವ್ ಅವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರುಗಿತು. ಮೊದಲು ಅಧ್ಯಕ್ಷರು ಶಿಕ್ಷಣೋಪಕರಣಗಳ ಪ್ರದರ್ಶನವನ್ನು ತೆರೆದರು. ಅನಂತರ ಪ್ರಾರ್ಥನೆ. ಹೆಡ್‌ಮಾಸ್ತರರಿಂದ ವರದಿವಾಚನ, ಬಹುಮಾನ ಎತರಣ ಮೊದಲಾದುವುಗಳು ನಡೆದುವು. ಸಭಾಧ್ಯಕ್ಷರು ಹಿತಸೂಚನೆಗಳನ್ನಿತ್ತು ಶಾಲೆಯ ಶ್ರೇಯೋಭಿವೃದ್ಧಿಯನ್ನು ಹಾರೈಸಿದರು. ವಂದನಾರ್ಪಣದ ಬಳಿಕ ಕನ್ನಡ ತುಳು ನಾಟಕ ಮೊದಲಾದುವುಗಳು ಇದ್ದುವು.

ಮುನಿಸಿಪಲ್ ಕೌನ್ಸಿಲು ಎಲೆಕ್ಟಿಂಗ್

ನಮ್ಮ ಮುನಿಸಿಪಲ್ ಕೌನ್ಸಿಲಿನ ಕಳೆದ ಎಲೆಕ್ಟಿಂಗಿನಲ್ಲಿ ಲೋವರ್ ಎಲಿಮೆಂಟರಿ ಹಾ॥ ಎ॥ ಗ್ರೇಡಿಗೆ ಅರ್ಹತೆಯನ್ನು ಪಡೆದ ಸ್ಥಳೀಯ ಸಂಸ್ಥೆಗಳ ಉಪಾಧ್ಯಾಯರುಗಳಿಗೆ ಸಂಬಳದ ಸ್ಕೇಲ್ ಏರಿಸಬೇಕೆಂಬ ಸರಕಾರದ ಹುಕ್ಕುಮಿನಂತೆ ಅಂಥ ಉಪಾಧ್ಯಾಯರಿಗೆ ತಾ. ೧೯-೩-೪೬ರಿಂದ ಸಂಬಳವೇರಿಸಿ ಕೊಡಲು ನಿರ್ಧರಿಸಲಾಯಿತು.

ಅನಂತರ, ಈ ಕೌನ್ಸಿಲಿನವರು ಕಮಿಶನರರಿಗೆ "ಟಿಪ್ ಟಾಪ್"ನವರಿಗೆ ಲೈಸನ್ಸ್ ಕೊಡುವ ವಿಚಾರದಲ್ಲಿ ಹಿಂದೆ ತಾ. ೨೬ನೇ ಮಾರ್ಚಿನಲ್ಲಿ ಮಂಜೂರು ಮಾಡಿದ ಅದೊಂದು ನಿರ್ಣಯದ ವಿಚಾರದಲ್ಲಿ ಸರಕಾರದವರು ಈ ಕೌನ್ಸಿಲಿನವರಿಂದ ಕೇಳಿದ ಆ ವಿವರಣೆಯ ಕುರಿತು ಸಮಾಲೋಚಿಸಿ ಕೌನ್ಸಿಲ್ ಈ ಕೆಳಗಿನ ತರಾವನ್ನು ಮಂಜೂರು ಮಾಡಿತು:—

"ಈ ಕೌನ್ಸಿಲು ಇದೇ ಕಳೆದ (೪೬ನೇ ಇಸ್ವಿ) ಮಾರ್ಚಿ ತಾ. ೨೬ರಲ್ಲಿ ಮಂಜೂರು ಮಾಡಿದ ಆ ತರಾವಿನಲ್ಲಿ ಮಂಗಳೂರಿನ "ಟಿಪ್ ಟಾಪ್ ಎಮ್ಯೂಸ್‌ಮೆಂಟಿನವರು" ತಮ್ಮ ಆಟಗಳನ್ನು ಪ್ರದರ್ಶಿಸುವ ಕುರಿತಾದ ತನ್ನ ಅಭಿಪ್ರಾಯವನ್ನು ಮಾತ್ರ ಸೂಚಿಸಿತ್ತು. ಆ ಆಟಗಳ ಸ್ವಭಾವ ಮತ್ತು ಇಲ್ಲಿನ ಪತ್ರಿಕೆಗಳಲ್ಲಿ ಪ್ರಕಟವಾದ ಮುಂದಾಳುಗಳ ಹಾಗೂ ಜನತೆಯಲ್ಲಿ ಹೊಣೆಗಾರಿಕೆಯರಿತ ಆಧ್ಯರ ಅಭಿಪ್ರಾಯಗಳ ಮೇಲಿಂದ ಕೌನ್ಸಿಲು ಈ ಅಭಿಪ್ರಾಯ ಮಾಡಿತ್ತು. ಮೇಲ್ಕಂಡ ತರಾವು ಕಮಿಶನರಿಗೊಂದು ಅಪ್ಪಣೆಯಾಗಿರಲಿಲ್ಲ. ಸರಕಾರದವರು ಇದೇ ಇಸ್ವಿ ಏಪ್ರಿಲ್ ತಾ. ೩ರಲ್ಲಿ "ಟಿಪ್ ಟೋಪ್"ನವರಿಗೆ "ಪ್ಲೇಸಸ್ ಆಫ್ ಪಬ್ಲಿಕ್ ರಿಸೋರ್ಟ್" ಆಕ್ಟಿನಂತೆ ಕಮಿಶನರರು ಲೈಸನ್ಸನ್ನು ನವೀಕರಿಸಿ ಕೊಡಲೇ ಬೇಕೆಂದು ಕಮಿಶನರರಿಗೆ ತಮ್ಮ ಮೆಮೊರಾಂಡಮಿನಲ್ಲಿ ಅಪ್ಪಣೆ ಮಾಡಿದ್ದರಲ್ಲಿ, ಸರಕಾರದವರು ಆ ಆಕ್ಟಿನ ಮೇರೆಗೆ ತಮಗಿರುವ ಅಧಿಕಾರವನ್ನು ಎಂದಿ ವರ್ತಿಸಿದ್ದಾರೆ. ಈ ವಿಷಯದಲ್ಲಿ ಕೌನ್ಸಿಲು ಪಡೆದಿರುವ ವಕೀಲರ ಅಭಿಪ್ರಾಯವನ್ನೂ, ಕಳೆದ ಏಪ್ರಿಲ್ ತಾ. ೩ರಲ್ಲಿನ ಕಲೆಕ್ಟರರ ಪ್ರೊಸಿಡಿಂಗ್ಸನ್ನೂ ಅಲ್ಲದೆ "ಟಿಪ್ ಟೊಪ್ ಎಮ್ಯೂಸ್‌ಮೆಂಟ್ಸ್"ನವರ ಕುರಿತಾದ ಪ್ರೆಸ್ಸಿನ ಅಭಿಪ್ರಾಯ ಮತ್ತು ಕಾಗದ ಪತ್ರಗಳ ಪ್ರತಿಗಳನ್ನೂ ಸರಕಾರಕ್ಕೆ ಕಳುಹಿಸಿ ಕೊಡತಕ್ಕದ್ದು"

ಪ್ರೆಸ್ ಕೆಲಸಗಾರರ ಸಂಘದ ವಾರ್ಷಿಕ ಮಹಾಸಭೆ

ದ. ಕ. ಜಿಲ್ಲಾ ಪ್ರೆಸ್ ಕೆಲಸಗಾರರ ಸಂಘದ ೯ನೇ ವಾರ್ಷಿಕ ಮಹಾ ಸಭೆ ಈಚಿಗೆ ರಘುನಾಥಯ್ಯ ಸ್ಮಾರಕ ಭವನದಲ್ಲಿ ಶ್ರೀ. ಕೆ. ಕೃಷ್ಣರಾವ್ ಬಿ. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ. ಚಂದ್ರಶೇಖರ ಅವರು ವಾರ್ಷಿಕ ವರದಿಯನ್ನೂ ಲೆಕ್ಕ ಪತ್ರಗಳನ್ನೂ ಸಭೆಯ ಮುಂದಿಟ್ಟು ಅವು ಮಂಜೂರಾದುವು. ಶ್ರೀಗಳಾದ ಕೆ. ಕೆ. ಸೆಟ್ಟಿ, ಶಾಂತರಾಮ್ ಪೈ, ಎಸ್. ಎನ್. ಹೊಳ್ಳ ಇವರು ಭಾಷಣಗಳಾದವು. ಚಾಲ್ತಿ ವರ್ಷಕ್ಕೆ ಶ್ರೀ. ಎಸ್. ಎನ್. ಹೊಳ್ಳರು ಅಧ್ಯಕ್ಷರಾಗಿ ಉಳ್ಳ ಒಂದು ಸಮಿತಿ ರಚಿಸಲ್ಪಟ್ಟಿತು. ಶ್ರೀ ನಾರಾಯಣ ಗುರು ಪ್ರೆಸ್ಸಿನ ಕಟ್ಟಿಣವನ್ನು ದುರುಸ್ತಿಗೊಳಿಸಬೇಕೆಂದೂ, ಪ್ರೆಸ್ ಕೆಲಸಗಾರರಿಗೆ "ಸಪ್ಲಿಮೆಂಟರಿ ರೇಶನ್" ಕೊಡಬೇಕೆಂದೂ, ಸಂಪೂರ್ಣ ಸ್ವಾತಂತ್ರ್ಯವನ್ನು ಬ್ರಿಟನ್ನು ಕೂಡಲೇ ಒಪ್ಪಿ ಕೊಳ್ಳಬೇಕೆಂದೂ ಇತ್ಯಾದಿ ತರಾವುಗಳು ಮಂಜೂರಾದವು.

ಬೆಂಗಳೂರಿನ ಜನಪದ ಕಲಾ ಉತ್ಸವದಲ್ಲಿ ದಕ್ಷಿಣ ಕನ್ನಡಿಗರ ಕಾರ್ಯಕ್ರಮ

ಇದೇ ಕಳೆದ ೧೭-೪-೪೬ ಮತ್ತು ೧೮-೪-೪೬ ಈ ಎರಡು ದಿವಸಗಳಲ್ಲಿ ಬೆಂಗಳೂರಿನ ಸರ್. ಕೆ. ಪಿ. ಪುಟ್ಟಣ್ಣ ಚೆಟ್ಟಿ ಟೌನ್ ಹಾಲಿನಲ್ಲಿ ಮೈಸೂರು ವಯಸ್ಕರ ಶಿಕ್ಷಣ ಸಮಿತಿಯವರ ಆಶ್ರಯದಲ್ಲಿ ಜನಪದ ಕಲಾ ಉತ್ಸವವು ಜರುಗಿತು. ಮೊದಲಿನ ದಿವಸದ ಕಾರ್ಯಕ್ರಮಗಳಿಗೆ ಅಲ್ಲಿಯ ರೆವಿನ್ಯೂ ಮಂತ್ರಿಗಳಾದ ಎಂ॥ ಒ. ವುಲ್ಲಾರೆಡ್ಡಿ ಎಂ. ಎ. ಐ. ಸಿ. ಎಸ್. ಅವರು ಅಧ್ಯಕ್ಷತೆ ವಹಿಸಿದ್ದರು. ಈ ದಿವಸ ದೊಡ್ಡ ಬಳ್ಳಾಪುರ, ಎೀರ ನಾಯಕನ ಹಳ್ಳಿ ಮೊದಲಾದ ಕಡೆಯವರ ಕಾರ್ಯಕ್ರಮಗಳಿದ್ದುವು ಆದರೆ ಮೊದಲಿನ ದಿವಸಕ್ಕಿಂತಲೂ ಎರಡನೇ ದಿವಸದ ಕಾರ್ಯಕ್ರಮಗಳು ಬಹಳ ಸೊಗಸಾಗಿ ಸಕಲರ ಪ್ರೀತಿಗೆ ಪಾತ್ರವಾಯಿತು ದಕ್ಷಿಣ ಕನ್ನಡ ಜಿಲ್ಲೆಯ ತುಳು ಜನಪದದ ಹಾಡುಗಳನ್ನು ಶ್ರೀ. ಬಿ. ಎಂ. ಇದಿನಬ್ಬನವರು ಹಾಡಿ ತೋರಿಸಿದರು. ಎರಡನೇ ದಿವಸ ಮುಖ್ಯವಾಗಿ ಶ್ರೀಮಾನ್ ಶಿವರಾಮ ಕಾರಂತರು ಬರೆದ "ಲವ ಕುಶ" ಛಾಯಾ ನಾಟಕವು ಬಹಳ ಉತ್ತಮವಾಗಿತ್ತು. ನಾಟಕದ ಗೀತಗಳನ್ನು ಹಿಮ್ಮೇಳದಲ್ಲಿ ಶ್ರೀ. ಕಾರಂತರೇ ಹಾಡಿದರು. ಛಾಯಾ ದೃಶ್ಯಗಳು ಜನರನ್ನು ಬೆರಗುಗೊಳಿಸಿದುವು. ಆ ಮೇಲೆ ಶ್ರೀ. ಕಾರಂತರು ದಕ್ಷಿಣ ಕನ್ನಡ ಜಿಲ್ಲೆಯ "ಯಕ್ಷಗಾನ" ನೃತ್ಯದ ಕೆಲವು ಮಾದರಿಗಳನ್ನು ನರ್ತಿಸಿದರು. ಅವರ ಜೊತೆಯಾಗಿ ಕಲ್ಲಡ್ಕದ ಶ್ರೀ. ನಾರಾಯಣ ಎಂಬವರೂ ನರ್ತಿಸಿದ್ದರು. "ಯಕ್ಷಗಾನ" ನೃತ್ಯದ ಮತ್ತು ಛಾಯಾ ನಾಟಕದ ಹಿಮ್ಮೇಳದಲ್ಲಿ ಶ್ರೀಯುತರುಗಳಾದ ಶ್ರೀನಿವಾಸ ಉಡುಪ, ಈಶ್ವರ ಕುಂಜತ್ತಾಯ ಮತ್ತು ನಾರಾಯಣ ಭಾಗವತ ಇವರುಗಳಿದ್ದರು.

ಎರಡನೇ ದಿವಸದ ಅಧ್ಯಕ್ಷತೆಯನ್ನು ಆರೋಗ್ಯ ಮತ್ತು ಶಿಕ್ಷಣ ಮಂತ್ರಿಗಳಾದ ಡಾ॥ ಟಿ. ಸಿ. ಎಂ. ರೋಯನ್ ಎಂ. ಡಿ. ಅವರು ವಹಿಸಿದ್ದರು.

ದಕ್ಷಿಣ ಕನ್ನಡದಲ್ಲಿ ನೂಲಿನ ಕೊರತೆ

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಲ್ಲೂ ನೂಲಿನ ಕೊರತೆ ಭೀಕರವಾಗಿರುತ್ತದೆ. ಈ ವಿಷಯದಲ್ಲಿ ದ. ಕ. ಜಿಲ್ಲಾ ಟ್ರೇಡ್ ಯೂನಿಯನ್ ಕೌನ್ಸಿಲಿನ ಪ್ರತಿನಿಧಿಗಳಾದ ಶ್ರೀ. ಎ ಶಾಂತಾರಾಮ ಪೈ ಅವರು ಮದ್ರಾಸ್ ಪ್ರಾಂತಿಕ ಟೆಕ್ಸ್‌ಟೈಲ್ ಕಮಿಶನರನ್ನು ಕಲ್ಲಿಕೋಟೆಯಲ್ಲಿ ಭೇಟಿಯಾಗಿ ಚರ್ಚಿಸಿ, ಒಂದು ಮನವಿಯನ್ನು ಅವರಿಗೆ ಕೊಟ್ಟಿರುತ್ತಾರೆ. ೧೦೦-೧೫೦ ಬೆಲ್ಸ್ ನೂಲನ್ನು ಜಿಲ್ಲೆಗೆ ಕಳುಹಿಸಿಕೊಡಬೇಕು ಎಂಬ ಕೇಳಿಕೆಯೂ ಅಡಕವಾಗಿದೆ.

ಕಾಸರಗೋಡು ಸೋ ಮಿಲ್ ಕೆಲಸಗಾರರ ಸಮ್ಮೇಳನ

ಕಾಸರಗೋಡಿನ ಸೋ ಮಿಲ್ ಕೆಲಸಗಾರರ ಸಂಘದ ಪ್ರಥಮ ವಾರ್ಷಿಕ ಸಮ್ಮೇಳನವು ಈಚಿಗೆ ಶ್ರೀ। ಬಿ. ಎಸ್. ಕಕ್ಕಿಲ್ಲಾಯ, ಬಿ. ಎ. ಬಿ. ಎಲ್. ಅವರ ಅಧ್ಯಕ್ಷತೆಯಲ್ಲಿ ನೆಲ್ಲಿಕುಂಜೆ ಮೈದಾನಿನಲ್ಲಿ ಜರುಗಿತು. ಬೆಳಿಗ್ಗೆ ೧೦ ಗಂಟೆಗೆ ಸಂಘದ ಮಹಾ ಸಭೆ ಜರಗಿ ವಾರ್ಷಿಕ ವರದಿ, ಲೆಕ್ಕಪತ್ರ ಮತ್ತು ಮಜೂರರ ಕೇಳಿಕೆಗಳ ತರಾವುಗಳು ಮಂಜೂರಾದುವು. ಸಾಯಂಕಾಲ ಹಂಚಿನ ಕೆಲಸಗಾರರ ಸಹಕಾರದೊಂದಿಗೆ ಎಲ್ ಮಜೂರರ ಮೆರವಣಿಗೆಯಾಗಿ, ೫-೩೦ಕ್ಕೆ ಬಹಿರಂಗ ಅಧಿವೇಶನ ಪ್ರಾರಂಭವಾಯಿತು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ॥ ಎಂ. ಅಂಚನ್ ಅವರು ವರದಿಯನ್ನೋದಿ, ಅತಿಥಿಗಳನ್ನು ಸ್ವಾಗತಿಸಿದ ಬಳಿಕ ಶ್ರೀ॥ ಬಿ. ಎ. ಕಕ್ಕಿಲ್ಲಾಯರು ಸಭೆಯನ್ನು ಉದ್ಘಾಟನೆ ಮಾಡಿದರು. ಮಂಗಳೂರಿನ ಹಂಚು, ಬೀಡಿ, ನೇಯ್ಗೆ ಮಜೂರ ಸಂಘಗಳ ಪ್ರತಿನಿಧಿಗಳೂ, ಕಾಂಞಂಗಾಡಿನ ನೇಕಾರ ಸಂಘದ ಪ್ರತಿನಿಧಿಗಳೂ ಸಂದೇಶಗಳನ್ನಿತ್ತರು. ಆ ಮೇಲೆ ಅಧ್ಯಕ್ಷರು ಮಾತನಾಡುತ್ತಾ, ನ್ಯಾಯವಾದ ಕೇಳಿಕೆಗಳಿಗಾಗಿ ನಡೆಸುವ ಮುಷ್ಕರಗಳು ಸತ್ಯಾಗ್ರಹದ ಹಾಗೆ; ಅವುಗಳಿಗೆ ಸಹಾಯ ಕೇಳುವುದೂ ಸರಿ, ಸಹಾಯ ನೀಡುವುದೂ ಜನರ ಕರ್ತವ್ಯ; ಕೇಳಿಕೆಗಳು ನ್ಯಾಯವಾಗಿರಬೇಕು; ಸಂಘಟನೆ ಕೆಲಸಗಾರರಿಗೆ ಅತಿ ಅಗತ್ಯ ಎಂದರು ಬೆಳಿಗ್ಗೆ ಮಂಜೂರಾಗಿದ್ದ ತರಾವುಗಳು ಓದಲ್ಪಟ್ಟುವು.

ಕಂಠೀರವನಿಗೆ ಚಂದಾದಾರರಾಗಿರಿ.

ಶ್ರೀ. ಕೋಟಿ ರೆಡ್ಡಿ

ಇವರು ೨೬ರಿಂದ ೩೫ರ ವರೆಗೆ ಮದ್ರಾಸ್ ಲೆ॥ ಕೌನ್ಸಿಲಿನ ಮೆಂಬರರು; ಅವರು ೩೫ರಲ್ಲಿ ರಾಯಲ ಸೀಮಾ ಕ್ಷಾಮ ನಿವಾರಣಾ ಸಮಿತಿಯ ಅಧ್ಯಕ್ಷರಾಗಿದ್ದರು. ೧೯೩೭ರಲ್ಲಿ ಅನಂತರ ೪೬ರಲ್ಲಿ ಇವರು ಎಸೆಂಬ್ಲಿ ಮೆಂಬರರಾದರು.

ಶ್ರೀ. ಕೂರ್ಮಯ್ಯ

ಇವರು ಆದಿ ಆಂಧ್ರ ಸಮಾಜದವರು; ೨೧ರಲ್ಲಿ ವಿದ್ಯಾಭ್ಯಾಸಕ್ಕೆ ತಿಲಾಂಜಲಿ ಕೊಟ್ಟರು. ಆಗಲೇ ಅಸಹಕಾರದಲ್ಲಿಯೂ ಧುಮ್ಮಿಕ್ಕಿದವರು. ಅವರು ಅನಂತರ ಕಾಶೀ ವಿಶ್ವವಿದ್ಯಾನಿಲಯವನ್ನು ಸೇರಿದರು. ಆ ವಿಶ್ವವಿದ್ಯಾನಿಲಯದಿಂದ ಕೃತಾರ್ಥರಾಗಿ ಹೊರ ಬಂದ ಪ್ರಥಮ ಹರಿಜನ ವಿದ್ಯಾರ್ಥಿ ಗಾಂಧೀಜಿಯನ್ನೇ ಭೇಟಿಯಾದರೇ. ಅವರು ಕೆಲ ಕಾಲ ಸಬರಮತಿ ಸತ್ಯಾಗ್ರಹ ಆಶ್ರಮದಲ್ಲಿದ್ದರು. ಇವರು ಆದಿ ಆಂಧ್ರ ಪ್ರಾಂತಿಕ ಫೆಡರೇಶನಿನ ಅಧ್ಯಕ್ಷರಾಗಿದ್ದರು. ಇವರು ಹಿಂದಿನ ಮದ್ರಾಸ್ ಎಸೆಂಬ್ಲಿಯಲ್ಲಿಯೂ ಇದ್ದರು.

ಸತ್ಕಾರ ಕೂಟ—ಮೂಲ್ಕಿ

ಈಚಿಗೆ ಪುರಜನರನೇಕರು ಶ್ರೀ. ಸದಾಶಿವರಾವ್, ಅವರ ಅಧ್ಯಕ್ಷತೆಯಲ್ಲಿ, ಸ್ಥಳೀಯ ಹೈಸ್ಕೂಲಿನ ವಠಾರದಲ್ಲಿ ಸಭೆ ಸೇರಿ "ಅಯೋಧ್ಯೆಯ ಶ್ರೀ. ಸಂಸ್ಕೃತ ಕಾರ್ಯಾಲಯದ ವಿದ್ವನ್ಮಂಡಳಿ"ಯವರಿಂದ ಶ್ರೀ. ಶ್ರೀ. ಪಂಡಿತ್ ಎಚ್. ಶಿವರಾವ್ ಇವರು "ಆಯುರ್ವೇದ ಭೂಷಣ" ಎಂಬ ಬಿರುದನ್ನೂ ವಿದ್ವಾನ್ ಗೋವಿಂದರಾವ್ ಇವರು "ಸಾಹಿತ್ಯ ಭೂಷಣ" ಎಂಬ ಬಿರುದನ್ನೂ ಪಡೆದ ಸಂತೋಷಾರ್ಥವಾಗಿ ಉಭಯತರಿಗೂ ಲಘೂಪಹಾರವನ್ನಿತ್ತು ಸನ್ಮಾನಿಸಿದರು.

ನಿಮ್ಮ ಬಟ್ಟೆಗಳನ್ನೂ ಸಾಬೂನನ್ನೂ ಉಳಿಸಿರಿ

1 ಬಟ್ಟೆಗಳನ್ನು ಕೊಳೆ ಬಿಡುವುದಕ್ಕಾಗಿ ಬಿಸಿ ನೀರಿನಲ್ಲಿ ತೊಳೆಯಿರಿ.

2 ಕೊಳೆ ಹೋಗುವುದಕ್ಕೆ ಬೇಕಾದಷ್ಟು ಮಾತ್ರ ೫೦೧ ಸಾಬೂನನ್ನು ಮಿತವಾಗಿ ಉಪಯೋಗಿಸಿರಿ.

3 ಬಟ್ಟೆಗಳನ್ನು ಶುದ್ಧವಾದ ನೀರಿನಲ್ಲಿ ಚೆನ್ನಾಗಿ ಜಾಲಾಡಿಸಿರಿ.



ನೀವು ಹೀಗೆ ಮಾಡುವುದರಿಂದ ಸಾಬೂನು ಉಳಿಯುವುದಲ್ಲದೆ ಬಟ್ಟೆಗಳೂ ಬಾಳಿಕೆ ಬರುತ್ತವೆ.

501 ಸಾಬೂನುಗಳು

ದಿ ಟಾಟಾ ಆಯಿಲ್ ಮಿಲ್ಸ್ ಕಂಪೆನಿ, ಲಿಮಿಟೆಡ್.

ಮೂರು ಪಂಗಡಗಳವರ ಸಂಯುಕ್ತ ಮಹಾ ಸಮ್ಮೇಳನ

ಭಾರತಕ್ಕೊಂದು ಯೋಜನೆ

ಭಾರತದ ಸ್ಟೇಟ್ ಸೆಕ್ರೆಟರಿಗಳಾದ ಲಾರ್ಡ್ ಪೆತಿಕ್ ಲಾರೆನ್ಸ್ ಅವರು ಕಾಂಗ್ರೆಸಿನ ಮತ್ತು ಮುಸ್ಲಿಂ ಲೀಗಿನ ಅಧ್ಯಕ್ಷರುಗಳಿಗೊಂದು ಪತ್ರವನ್ನು ಬರೆದು, ಅದರಲ್ಲಿ ಬ್ರಿಟಿಶ್ ನಿಯೋಗ ಗೋಷ್ಠಿಯವರು ಭಾರತದ ಸಮಸ್ಯೆಗಳ ಕುರಿತಾಗಿ ಆಲೋಚಿಸಿರುವ ಒಂದು ಯೋಜನೆಯ ವಿಚಾರವನ್ನು ವಿವರಿಸುತ್ತ "ನೀವು ಎರಡು ಪಂಗಡದವರೂ ಒಂದೊಂದು ಪಂಗಡದಿಂದ ನಾಲ್ಕು ನಾಲ್ಕು ಮಂದಿ ಪ್ರತಿನಿಧಿಗಳನ್ನು ಈ ಸಮ್ಮೇಳನಕ್ಕೆ ಕಳುಹಿಸಿ" ಎಂದು ಆಮಂತ್ರಣ ಕೊಟ್ಟಿರುತ್ತಾರೆ.

ನಿಯೋಗಗೋಷ್ಠಿಯವರ ಯೋಜನೆ—ಸೂಚನೆ

(೧) ಒಂದು ಭಾರತ ಯೂನಿಯನ್ನು ಸ್ಥಾಪಿಸಲಾಗುವುದು. ಅದು ರಕ್ಷಣೆ, ವಿದೇಶೀ ಕಾರ್ಯಭಾರ, ಕಸ್ಟಮ್ಸ್ ಮತ್ತು ರಸ್ತೆ ಇತ್ಯಾದಿ ವಹಿವಾಟು ಸಾಧನ ಇವುಗಳ ಮೇಲ್ವಿಚಾರ ನಡೆಸುವುದು.

(೨) ಪ್ರಾಂತಗಳನ್ನು ಮುಸ್ಲಿಂ ಮತ್ತು ಮುಸ್ಲಿಂ ಅಲ್ಲದ ಪ್ರಾಂತಗಳನ್ನಾಗಿ ಎಂಗಡಿಸಲಾಗುವುದು; ಅವು ಯೂನಿಯನಿಗೆ ಬಿಟ್ಟುಕೊಟ್ಟಂತೆ ನಮೂದಿಸಲಾದ ಅಧಿಕಾರದ ಹೊರತಾದ ಇತರ ಯಾವತ್ತೂ (ಸಂಸ್ಥಾನ ಸಂಬಂಧದ) ಅಧಿಕಾರಗಳನ್ನೂ ಆ ಪ್ರಾಂತಗಳು ಚಲಾಯಿಸುವವು.

(೩) ದೇಶೀಯ ಸಂಸ್ಥಾನಗಳು ಈ ಯೂನಿಯನಿನೊಡನೆ ಯಾವ ಶರ್ತಗಳ ಮೇಲೆ ಸೇರಲು ಇಷ್ಟಪಡುವವೆಂಬುದನ್ನು ತಿಳಿದುಕೊಳ್ಳಲು ಅವುಗಳೊಡನೆ ಯೂನಿಯನ್ ಸರಕಾರವು ಕಾಲಾನುಭಾಗದಲ್ಲಿ ವ್ಯವಹರಿಸುವದು.

ಈ ಆಮಂತ್ರಣವು ತಲುಪಿದ ಮೇಲೆ ರಾಷ್ಟ್ರಪತಿ ಆಜಾದರು ಈ ನಿಯೋಗಗೋಷ್ಠಿಯವರಿಗೆ ಕೆಲವೊಂದು ಸಂಶಯ ನಿವೃತ್ತಿಗಾಗಿ ಪತ್ರ ಬರೆದಿದ್ದರು ಅವೀಗ ನಿವೃತ್ತಿಗೊಳಿಸಲ್ಪಟ್ಟಿವೆ

ಈ ಆಮಂತ್ರಣವನ್ನು ಲೀಗಿನವರೂ ಕಾಂಗ್ರೆಸಿನವರೂ ಸ್ವೀಕರಿಸಿದ್ದಾರೆ. ಕಾಂಗ್ರೆಸಿನ ಪ್ರತಿನಿಧಿಗಳಾಗಿ ಈ ಸಮ್ಮೇಳನಕ್ಕೆ ಮೌಲಾನಾ ಆಜಾದ್, ಪಂಡಿತ ನೆಹರೂ, ಸರ್ದಾರ್ ಪಟೇಲ್ ಮತ್ತು ಖಾನ್ ಅಬ್ದುಲ್ ಗಾಫರ್ ಖಾನ್ ಸಾಹೇಬರು ತೆರಳುವರೆಂದು ತಿಳಿದುಬಂದಿದೆ. ಲೀಗಿನ ಪರವಾಗಿ ಎಂ. ಜಿನ್ನರೊಡನೆ ಇನ್ನು ಮೂವರು ಪ್ರತಿನಿಧಿಗಳು ಸಮ್ಮೇಳನಕ್ಕೆ ತೆರಳುವರು.

ಗೋಷ್ಠಿಯವರ ಯೋಜನೆಗೆ ಕಾಂಗ್ರೆಸ್ ಬದ್ಧವಾಗಬೇಕಿಲ್ಲ

ಮೌಲಾನಾ ಆಜಾದರು ಸ್ಟೇಟ್ ಸೆಕ್ರೆಟರಿಗಳಿಗೆ ಈ ಸಮ್ಮೇಳನದ ವಿಷಯದಲ್ಲಿ ಒಂದು ಪತ್ರ ಬರೆದಿದ್ದು ಅದಕ್ಕೆ ತಕ್ಕ ಉತ್ತರವನ್ನು ಪಡೆದಿದ್ದಾರೆ. "ಈ ನಿಯೋಗಗೋಷ್ಠಿಯವರ ಸೂಚನೆಗಳಿಗೆ ಕಾಂಗ್ರೆಸಿನವರು ಯಾವ ರೀತಿಯಲ್ಲಿಯೂ ಕಟ್ಟು ಬೀಳಬೇಕಾಗಿಲ್ಲ—ಅವು ಅವರನ್ನು ಬಾಧಿಸತಕ್ಕವಲ್ಲ" ಎಂದು ಸ್ಟೇಟ್ ಸೆಕ್ರೆಟರಿಗಳು ಉತ್ತರ ಕೊಟ್ಟು ಭರವಸೆ ಹೇಳಿದ್ದರ ಮೇಲೆ ರಾಷ್ಟ್ರಪತಿ ಮೌಲಾನರು ಈ ಸಮ್ಮೇಳನದ ಆಮಂತ್ರಣವನ್ನು ಸ್ವೀಕರಿಸಿರುತ್ತಾರೆ.

ಸಮ್ಮೇಳನ ಸಿಮ್ಲದಲ್ಲಿ

ಬ್ರಿಟನಿನ ಮೂರು ಮಂದಿ ಮಂತ್ರಿಗಳು, ವೈಸರಾಯರು, ಕಾಂಗ್ರೆಸಿನ ನಾಲ್ವರು, ಲೀಗಿನ ನಾಲ್ವರು ಪ್ರತಿನಿಧಿಗಳು ಹೀಗೆ ೧೨ ಮಂದಿ ಮಹಾಸಭಾಸದರ ಸಮ್ಮೇಳನದ ಅಧಿವೇಶನ ಸಿಮ್ಲದಲ್ಲಿ ನೆರೆಯುವ ವ್ಯವಸ್ಥೆಯಾಗಿದೆ. ಮಹಾತ್ಮರೂ ಇಷ್ಟರಲ್ಲೇ ಸಿಮ್ಲಕ್ಕೆ ತಲುಪಿರುವರು.

ನಿಯೋಗಗೋಷ್ಠಿಯವರ ಕೆಲಸ ಈ ತಿಂಗಳಲ್ಲಿ ಮುಗಿಯುವುದು?

ಬ್ರಿಟಿಶ್ ಮಂತ್ರಿಗಳು ಹೆಚ್ಚೆಂದರೆ ಈ ತಿಂಗಳ ಅಂತ್ಯದೊಳಗಾಗಿ ಇಲ್ಲಿನ ಕೆಲಸ ಮುಗಿಸಿ ಹಿಂತೆಗಳುವುದರಲ್ಲಿದ್ದಾರೆಂದು ತಿಳಿದು ಬಂದಿದೆ.

ಪತ್ರಿಕೋದ್ಯಮಿಗಳಿಗೆ "ಸ್ಪೆಶಲ್ ಟ್ರೈನು"

ಡಿಲ್ಲಿಯಿಂದ ಸಿಮ್ಲಕ್ಕೆ ಕಾನ್ಫರೆನ್ಸಿಗೆ ತೆರಳುವ ಪತ್ರಿಕೋದ್ಯಮಿಗಳಿಗಾಗಿ ಇಂಡಿಯಾ ಸರಕಾರದ ಸುದ್ದಿ ಪ್ರಚಾರ ಶಾಖೆಯವರು ಒಂದು "ಸ್ಪೆಶಲ್ ಟ್ರೈನಿನ" ಏರ್ಪಾಡನ್ನೇ ಮಾಡಿರುತ್ತಾರೆ.

ವೈಸರಾಯರ ಕೌನ್ಸಿಲರರಿಗೆ ಬಿಟ್ಟು ಹೊರಡಲು ನೋಟೀಸು

ವೈಸರಾಯರ ಈಗಿನ ಎಗ್ಜಿಕ್ಯುಟಿವ್ ಕೌನ್ಸಿಲಿನ ಮೆಂಬರುಗಳಿಗೆ ಆಯಾ ಸ್ಥಾನ ಬಿಟ್ಟು ಹೊರಡುವಂತೆ ನೋಟೀಸುಗಳು ಹೊರಟಿವೆ ಎಂದು ತಿಳಿದು ಬಂದಿದೆ. ಜೂನ ೧೯ಕ್ಕೆ, ಅವರು ಆ ಸ್ಥಾನದಿಂದ ಹೊರಡುವಂತೆ, ಮೂರು ತಿಂಗಳ ಮೊದಲೇ ಅವರಿಗೆ ಈ ನೋಟೀಸುಗಳನ್ನು ಕೊಡಲಾಗಿತ್ತೆಂದೂ ಇನ್ನೊಂದು ವಾರ್ತೆ ಹೊರಟಿದೆ. ಇದರಿಂದ ಬರುವ ಜೂನ್ ತಿಂಗಳಲ್ಲಿ ಈ ಎಗ್ಜಿಕ್ಯೂಟಿವ್ ಕೌನ್ಸಿಲಿನ ಬದಲಿಗೆ "ತಾತ್ಕಾಲಿಕ ಸರಕಾರ"ವೊಂದು ಏರ್ಪಾಡಾದೀತೇ ಎಂಬ ಸಂದೇಹ ಬರುತ್ತಿದೆ.

ಶ್ರೀ ಸುಭಾಸರು ನಲಂದದಲ್ಲಿ?

ಪ್ಯಾರೆಮನ್ ಪಾಸ್ಲಾನ್ ಎಂಬೊಬ್ಬ ಶ್ರಮಜೀವಿ ತಾನು ಸುಭಾಸ ಚಂದ್ರ ಬೋಸರನ್ನು ಪ್ರಾಚೀನ ವಿಶ್ವವಿದ್ಯಾನಿಲಯವಾದ ನಲಂದದ ಬಳಿಯಲ್ಲಿ ಮೊನ್ನೆ ಈಚೆಗೆ ಕಂಡನೆಂದು ಹೇಳುತ್ತಾನೆ.

ಶ್ರೀ. ಬೋಸರು ಬುಖ್ಟಿರ್‌ಪುರ ಬಿಹಾರ ರೈಲ್ವೆ ಟ್ರೈನಿನ ಮೂರನೆ ತರಗತಿಯ ಗಾಡಿಯೊಂದರಿಂದ ಇಳಿದು ಸ್ಟೇಶನನ್ನು ಅವಸರವಸರವಾಗಿ ದಾಟಿ, ಯಾರಿಗೂ ಕಾಣದಂತೆ ಹೊಲಗಳ ಕಡೆಗೆ ಇಳಿದರು; ತಾನು ಬೋಸರನ್ನು ಹಿಂದೆ ಹಲವು ಬಾರಿ ಪಾಟ್ನಾದಲ್ಲಿ ಕಂಡಿರುವುದರಿಂದ ಇವರೇ ಅವರೆಂಬ ಅರಿವು ತನಗಾಯಿತು; ವ್ಯತ್ಯಾಸವೆಂದರೆ ಮೊದಲಿನ ಬೋಸರಿಗೆ ಎಸೆ ಇರಲಿಲ್ಲ; ಇವರಿಗೆ ಎಸೆ ಇತ್ತು, ಇಪ್ಪೆ. ಬೋಸರು ಖಾಕಿ ಇಜಾರು, ಶರ್ಟ್ ಧರಿಸಿಕೊಂಡು ಬೂದು ಬಣ್ಣದ ಕ್ಯಾನ್‌ವಾಸ್ ಪಾದರಕ್ಷೆ ಹಾಕಿಕೊಂಡಿದ್ದರು. ಇದನ್ನೆಲ್ಲ ತಾನೂ ತನ್ನ ಜತೆಗಾರರೂ ನೋಡಿದೆವು ಎಂದು ಪ್ಯಾರೆ ಮ್ಯಾನ್ ತಿಳಿಸಿದ್ದಾನೆ.

ಪ್ಯಾರೆಮ್ಯಾನ್ ಸುಭಾಸ ಚಂದ್ರ ಬೋಸರನ್ನೇ ಹಿಂಬಾಲಿಸಿ ಹೋದಾಗ ಬೋಸರು ಅಲ್ಲೊಂದು ಧಾನ್ಯದ ಹೊಲದಲ್ಲಿ ಕುಳಿತದ್ದು ಕಂಡು ಬಂತು. ಆಗ ಪ್ಯಾರೆಮ್ಯಾನ್ "ತಾವು ಪಾಟ್ನಾಕ್ಕೆ ದಯ ಮಾಡುತ್ತೀರಾ?" ಎಂದು ಬೋಸರನ್ನು ಪ್ರಶ್ನಿಸಿದ ಹಾಗೂ ಬೋಸರು ಮುಗುಳ್ನಗುತ್ತ "ತಾನು ಕ್ರಮಶಃ ಪಾಟ್ನಾಕ್ಕೆ ಬರುತ್ತೇನೆ" ಎಂದು ಹಿಂದಿಯಲ್ಲಿ ಉತ್ತರ ಕೊಟ್ಟ ಹಾಗೂ ಇನ್ನೂ ತನ್ನನ್ನು ಮಾತಾಡಿಸಬಾರದೆಂದು ಅಪೇಕ್ಷಿಸಿದ ಹಾಗೂ ಪ್ಯಾರೆಮ್ಯಾನ್ ಹೇಳುತ್ತಾನೆ.

ಬೇರೆ ಕೆಲವರಿಗೂ—ಅಲ್ಲಿದ್ದವರಿಗೆ—ಈತ ಸುಭಾಸನೆಂಬ ಸಂದೇಹ ಒಂತಾದರೂ ಈತ ಸಿ. ಐ. ಡಿ. ಎಂದಾಲೋಚಿಸಿ ಅವರು ಯಾರೂ ಅವನ ಶೋಧಕ್ಕೆ ಹೋಗಲಿಲ್ಲವೆಂದು ಈ ಕೂಲಿಗಾರನ ಹೇಳಿಕೆ.

Notice

In the Court of the District Munsiff of Mangalore.

S. C. No. 871/1946.

Between:—

Stanislaus Mascarenhas, son of Lawrence Mascarenhas, residing at Mahim, Bombay — Plaintiff.

and

Louis D'Souza, son of Monte Marian D'Souza, residing at Jeppoo, Mangalore — Defendant.

Notice to the defendant is hereby given that the plaintiff as Executor of the estate of the deceased Mrs. Cocess D'Souza, has filed the above suit against him for the recovery of the principal and interest due under the demand promissory note dated 23-2-1943 for Rs. 126/- executed by the defendant in favour of the said Mrs. Cocess D'Souza and that the said suit is posted to 6th June 1946 at 11 O'clock in the forenoon for hearing. In default of deft's appearance in Court on the said date either in person or by a pleader duly instructed, the suit will be heard and determined in his absence.

John Gonsalves, B.A LL.B.
Vakil for Plff.

Mangalore, 24—4—1946.

ಸಿಮ್ಲಾ ಕಾನ್ಫರೆನ್ಸಿನ ಹೆಜ್ಜೆ.

ನಿನ್ನೆ ಸಿಮ್ಲದಲ್ಲಿ ಆರಂಭವಾಗುವುದೆಂದಿದ್ದ ಮೇಲ್ಕಂಡ ಕಾನ್ಫರೆನ್ಸಿಗೆ ಬರಲು ತಮಗೆ ಇದೇ ಆದಿತ್ಯವಾರದ ವರೆಗೆ ಅನುಕೂಲವಿಲ್ಲವೆಂದು ಎಂ. ಜಿನ್ನರು ಸಂಬಂಧಪಟ್ಟವರಿಗೆ ತಿಳಿಸಿರುತ್ತಾರೆ ಎಂದು ಸುದ್ದಿ.

ಆಹಾರದ ಅಭಾವ—ಹೊಸದುರ್ಗ

ಹೊಸದುರ್ಗ ಸಬ್ ತಾಲೂಕಿನಲ್ಲಿ ಆಹಾರದ ಅಭಾವವು ತಲೆದೋರಿದೆ. ಕೆಲವು ರೇಷನ್ ಅಂಗಡಿಗಳಿಂದ ಕಳೆದ ಎರಡು ದಿನಗಳಿಂದ ಆಹಾರ ಧಾನ್ಯಗಳನ್ನು ಹಂಚಲ್ಪಟ್ಟಿಲ್ಲವೆಂದೂ ಅಲ್ಲಿನ ನಿವಾಸಿಕರು ಕಳವಳಗೊಂಡಿರುವರೆಂದೂ ಸುದ್ದಿ.

For Best Optical Goods & Rubber Stamps
M. S. PRABHU & Co.
Hampankatta, MANGALORE.
FOUNTAIN PEN REPAIRING A SPECIALITY

ಕ್ರಮವಾಗಿ ಪೆಪ್ಸ್ ಸೇವಿಸಿ ರಾತ್ರೆ ಜಳಿಯ ಕೆಡುಕುಗಳನ್ನು ನಿವಾರಿಸಿಕೊಳ್ಳಿ
ಗಂಟಲು, ಎದೆ ಮತ್ತು ಶ್ವಾಸಕೋಶದ ಅಸ್ವಸ್ಥತೆಗೆ ಬಿಲ್ಲೆರೂಪದಲ್ಲಿ ಪೆಪ್ಸ್ ಆದರ್ಶ ಚಿಕಿತ್ಸೆಯನ್ನೊದಗಿಸುತ್ತದೆ. ಎಲ್ಲೆಲ್ಲೂ ಬಿಕರಿ ಮಾಡಲ್ಪಡುತ್ತೆ.
ಏಜಂಟರು:—
ಮೆಸರ್ಸ್ ದಾಫಾ ಎಂಡ್ ಕೊ.
ಪಿ. ಟಿ. ಮದ್ರಾಸು.
ಪೆಪ್ಸ್ ಸೇವಿಸಿರಿ.
PEPS
ವಿಷಹಾರಕಶ್ವಾಸನೀಯ ಬಿಲ್ಲೆಗಳು

USE
OUR GENUINE
EUCALYPTUS OIL
FOR ALL
ACHES & PAINS

FOR HEALTH USE
SILVER KING CASTOR OIL
LAKSHMI OIL MILLS, COIMBATORE.

Printed & Published by M. Baburaya Prabhu, B. A.., at the Mangalore Press, Car-Street, Mangalore. Editor: Hurli Bhima Rao